ಕಥೆ

# ಕಾಲಗರ್ಭದ ಕಾಲುದಾರಿ



**ಅಲಕಾ ಕಟ್ಟೆಮನೆ**

ಕಲೆ: ಸಂತೋಷ್ ಸಸಿಹಿತ್ಲು

ಈ ಬಾರಿ ಕೇಜಿಯಣ್ಣನಿಗೆ ಮೊದಲೇ ಫೋನ್ ಮಾಡಿ ಹೇಳಿದ್ದೆ, ನಾವು ಬರುತ್ತಿರುವ ವಿಷಯವನ್ನು ಬೊಮ್ಮಜ್ಜನಿಗೆ ಹೇಳಬೇಡ ಎಂದು. ವಿಷಯ ತಿಳಿದರೆ ಮತ್ತೆ ಕಳೆದ ಸಾರಿ ಮಾಡಿದಂತೆ ಕಣ್ಮರೆಯಾಗಿಬಿಟ್ಟರೆ ಕಷ್ಟ. ಅಲ್ಲ, ವಿಚಿತ್ರವೆಂದರೆ ಮೊದಲಿಗೆ ಸರೀ ಇದ್ದವನು ಅದೊಂದು ವಿಷಯ ಕೇಳಿದ್ದೇ ತಡ, ಪರಾರಿ ಆಗಿಬಿಡಬೇಕೆ! ಮಾತ್ರವಲ್ಲ, ಈ ವಿಷಯಕ್ಕೆ ಯಾರೂ ತಮ್ಮನೆ ಬಾಗಿಲಿಗೆ ಬರುವುದೇ ಬೇಡ ಎಂದೂ ಹೇಳಿದ್ದನಂತಲ್ಲ. ಒಂದೊಂದು ಮೌಢ್ಯ ಅಂಟಿಕೊಂಡರೆ ಬಿಡಿಸುವುದಕ್ಕೆ ಜನ್ಮ ಕಳೆದರೂ ಸಾಧ್ಯವಿಲ್ಲ. ಅಷ್ಟೆಲ್ಲಾ ಕಡ್ಡಿ ಮುರಿದಂತೆ ಬರಬೇಡಿ ಎಂದು ಹೇಳುವುದಕ್ಕೆ ನಾನೇನು ಬೊಮ್ಮಜ್ಜನ ಸಾಲಗಾರಳೇ? ಏನೊ, ಸಹಜ ಕುತೂಹಲದಿಂದ ಕೇಳಿದ್ದೆನಷ್ಟೆ. ಅದರಲ್ಲೂ ನಮ್ಮ ಲೋಕಲ್ ತಿರುಗಾಟದ ಗೈಡಿನಂತೆ ಉತ್ಸಾಹದಿಂದ ಜೊತೆಗೆ ತಿರುಗುತ್ತಿದ್ದನಲ್ಲ ಎಂದು. ಇರಲಿ, ಈ ಬಾರಿ ಬಿಡಬಾರದು ಅವನನ್ನು... ಎಂದೆಲ್ಲಾ ಮನಸ್ಸಿನಲ್ಲೇ ಲೆಕ್ಕ ಹಾಕುತ್ತಿದ್ದೆ ಜೀಪನ್ನು ಯಾಂತ್ರಿಕವಾಗಿ ಜಡ್ಡಿಗದ್ದೆಯತ್ತ ತಿರುಗಿಸುತ್ತಾ.

ಈಗಿತ್ಲಾಗೆ ನನ್ನ ನೆನಪೂಂದ್ರೆ! ಅಲ್ಲ, ನನ್ನಷ್ಟಕ್ಕೆ ಮನಸ್ಸಲ್ಲೇ ಮಂಡಿಗೆ ತಿನ್ನುತ್ತಿದ್ದರೆ ನಿಮಗೇನು ಅರ್ಥವಾಗಬೇಕು ವಿಷಯ! ನನ್ನ ಮತ್ತು ಬೊಮ್ಮಜ್ಜನ ನಡುವೆ ಎಂಥದ್ದೋ ಭಯಂಕರ ವ್ಯವಹಾರವಿದೆಯೆಂದು ಭಾವಿಸಬೇಡಿ, ಅಂಥದ್ದೇನಿಲ್ಲ. ಕಳೆದ ಬಾರಿ ಡಾನ್ಸಿಂಗ್ ಫ್ರಾಗ್‌ಗಳನ್ನು ನೋಡಲೆಂದು ಸಹ್ಯಾದ್ರಿ ಸೆರಗಿನ ಜಡ್ಡಿಗದ್ದೆಯತ್ತ ಹೋಗಿದ್ದೆವು. ಅಲ್ಲಿ ನಮ್ಮಂಥ ಉತ್ಸಾಹಿಗಳ ಹಿರಿಯಣ್ಣನಂತೆ ಒದಗುವವರು ಕೇಜಿಯಣ್ಣ. ಕಾಡಿನ ಇಂಚಿಂಚೂ ಅರಿತಿರುವ ಆತ ಪಕ್ಕಾ ನ್ಯಾಚುರಲಿಸ್ಟ್. ಕಾಡಿನ ಮತ್ತು ಪ್ರಾಣಿಗಳ ನಾಡಿ ಹಿಡಿಯಬಲ್ಲರು. ಹಾಗಾಗಿ ಮಳೆಗಾಲದ ಯಾವ ದಿನಗಳಲ್ಲಿ ಡಾನ್ಸಿಂಗ್ ಫ್ರಾಗ್ ನೋಡಬಹುದು ಎಂಬುದೆಲ್ಲಾ ಅವರಿಗೆ ಚನ್ನಾಗಿ ಗೊತ್ತಿರುತ್ತದೆ. ಜೊತೆಗೆ ಒಂದಂಕಿ ಕಾಡು ನೋಡುವ ಕುತೂಹಲ. ಹಾಗಾಗಿ ನಾವು ನಾಲ್ಕಾರು ಆಸಕ್ತರು ಕೇಜಿಯಣ್ಣನ ಮನೆಯಲ್ಲಿ ಠಿಕಾಣಿ ಹೂಡಿದ್ದೆವು.

ಈ ಹೊತ್ತಿನಲ್ಲಿ ಭೇಟಿಯಾದವನು ಬೊಮ್ಮಜ್ಜ. ಕಾಡು ಬಿಟ್ಟು ಮತ್ತೊಂದು ಅರಿಯದ ಬೊಮ್ಮಜ್ಜ, ತಿಮ್ಮಜ್ಜ, ತಿಪ್ಪಜ್ಜ, ಮತ್ತೆ ಬೊಮ್ಮಜ್ಜ... ಅಂದರೆ ಅವರ ಹಿಂದಿನ ತಲೆಮಾರುಗಳು ನಾ ಹೇಳಿದ್ದು, ಎಲ್ಲರೂ ಕಾಡನ್ನೇ ದಾಟದವರು. ಈಗಿರುವ ಬೊಮ್ಮಜ್ಜನ ಪಾಲಿಗಾದರೂ ಪೇಟೆಯೆಂದರೆ ಜಡ್ಡಿಗದ್ದೆ ಪೇಟೆ. ಆದರೆ ಕೇಜಿಯಣ್ಣನ ಮನೆಗೆ ಬರುವ ಪೇಟೆಯ ಜನರನ್ನಾತ ಬಲ್ಲ. ನಮ್ಮನ್ನು ಕಂಡದ್ದೂ ಅವರ ಅತಿಥಿಗಳೆಂದೇ. ಸಪೂರನೆಯ